

بسم اللهِ الرّحمٰن الرّحيم

# ಸತ್ಯವಿಶ್ವಾಸಿಗಳು ಪರೀಕ್ಷಿಸಲ್ಪಡುವರು. ನಾವು ಪರೀಕ್ಷೆಗಳಿಂದ ಗಾಬರಿಗೊಳ್ಳದೆ ಮುಂದಡಿಯಿಡುತ್ತಾ ಸಾಗಬೇಕು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 02–10–**2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು.*

وَلَنَبْلُوَنَّكُمْ بِشَيْءٍ مِنْ الْخَوْفِ وَالْجُوعِ وَنَقْصٍ مِنْ الأَمْوالِ وَالأَنفُسِ وَالثَّمَرَاتِ وَبَشِّرْ الصَّابِرِينَ
الَّذِينَ إِذَا أَصَابَتْهُمْ مُصِيبَةٌ قَالُوا إِنَّا لِلَّهِ وَإِنَّا إِلَيْهِ رَاجِعُونَ

**ವ ಲನಬ್‌ಲುವನ್ನಕುಮ್ ಬಿಶೈಯಿನ್ ಮಿನಲ್ ಖೌಫಿವಲ್ ಜೂಇ ವ ನಖ್‌ಸಿನ್ ಮಿನಲ್ ಅಮ್‌ವಾಲಿ ವಲ್ ಅನ್‌ಫುಸಿ ವಸ್ಸಮರಾತಿ ವ ಬಶ್ಶಿರಿಸ್ಸಾಬಿರೀನ್. ಅಲ್ಲಝೀನ ಇಝಾ ಅಸಾಬತ್‌ಹುಮ್ ಮುಸೀಬತುನ್ ಖಾಲೂ ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ನಿಶ್ಚಯವಾಗಿಯೂ ನಿಮ್ಮನ್ನು ನಾವು ಕೆಲವು ಬಗೆಯ ಭಯಾಶಂಕೆ ಮತ್ತು ಹಸಿವಿನಿಂದಲೂ ಧನನಷ್ಟ, ಪ್ರಾಣಹಾನಿ ಮತ್ತು ಫಲನಷ್ಟಗಳಿಂದಲೂ ಪರೀಕ್ಷಿಸುವೆವು. (ಓ ಪ್ರವಾದಿ,) ನೀನು ಸಹನಶೀಲರಿಗೆ ಶುಭ ವಾರ್ತೆಯನ್ನು ತಿಳಿಸು. ಯಾರು ತಮಗೆ ಏನಾದರೂ ವಿಪತ್ತು ಬಂದೆರಗಿದರೆ, ಅವರು (ಗಾಬರಿಗೊಳ್ಳುವುದಿಲ್ಲ, ಬದಲು) ನಾವು ನಿಶ್ಚಯವಾಗಿಯೂ ಅಲ್ಲಾಹನಿಗಾಗಿ ಇರುವವರು ಹಾಗೂ ನಿಶ್ಚಯವಾಗಿಯೂ ಅವನೆಡೆಗೆಯೇ ಮರಳುವವರಾಗಿದ್ದೇವೆ ಎಂದು ಹೇಳುತ್ತಾರೆ. (ಪವಿತ್ರ ಖುರ್‌ಆನ್ 2: 156–157)

ಪವಿತ್ರ ಖುರ್‌ಆನಿನ ಈ ವಚನಗಳಲ್ಲಿ ಸತ್ಯವಿಶ್ವಾಸಿಗಳ ಒಂದು ವೈಶಿಷ್ಟ್ಯವನ್ನು ವಿವರಿಸಲಾಗಿದೆ. ಕಷ್ಟಗಳು ಮತ್ತು ವಿಪತ್ತುಗಳು ಬಂದೆರಗುವಾಗ ಅವರು ಹೇಗೆ ವರ್ತಿಸುತ್ತಾರೆಂದು ಪ್ರಸ್ತಾಪಿಸಲಾಗಿದೆ. ನೈಜ ಸತ್ಯವಿಶ್ವಾಸಿ ಯಾರೆಂದು ಈ ವೈಶಿಷ್ಟ್ಯಗಳನ್ನು ಪ್ರದರ್ಶಿಸುವಾಗ ತಿಳಿಯುತ್ತದೆ ಎಂದು ಅಲ್ಲಾಹನು ಹೇಳುತ್ತಾನೆ. ಸತ್ಯವಿಶ್ವಾಸಿಗಳು ಕೆಲವು ಸಾರಿ ವೈಯಕ್ತಿಕ ನಷ್ಟಗಳನ್ನು ಅನುಭವಿಸುತ್ತಾರೆ. ಕೆಲವು ಸಾರಿ ಜಮಾಅತ್‌ಗೆ ನಷ್ಟ ಸಂಭವಿಸುತ್ತದೆ. ಆದರೆ ನೈಜ ಸತ್ಯವಿಶ್ವಾಸಿ ಎಲ್ಲ ರೀತಿಗಳ ನಷ್ಟಗಳಿಂದ ಅಲ್ಲಾಹನ ಸಂಪ್ರೀತಿಯನ್ನು ಗಳಿಸುತ್ತಾ ಜಯಶಾಲಿಯಾಗಿ ಹೊರಗೆ ಬರುತ್ತಾನೆ. ಈ ವಿಷಯದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ವಿವಿಧ ಬರಹಗಳಲ್ಲಿ ಮತ್ತು ನುಡಿಗಳಲ್ಲಿ ಬಹಳ ವಿಸ್ತಾರವಾಗಿ ವಿವರಿಸಿದ್ದಾರೆ. ವಿವಿಧ ಪಾರ್ಶ್ವಗಳಿಂದ ಈ ವಿಷಯವನ್ನು ವಿಶದೀಕರಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್‌ಆನಿನ ಮೇಲೆ ಉಲ್ಲೇಖಿಸಿದ ವಚನಗಳನ್ನು ವಿವರಿಸುತ್ತಾ ಒಂದೆಡೆ ಹೀಗೆ ಹೇಳಿದ್ದಾರೆ: ವಿಪತ್ತುಗಳು ಕೆಟ್ಟವುಗಳೆಂದು ಭಾವಿಸಬೇಡಿರಿ. ಏಕೆಂದರೆ ವಿಪತ್ತುಗಳನ್ನು ಕೆಟ್ಟವುಗಳೆಂದು ಭಾವಿಸುವವನು ಸತ್ಯವಿಶ್ವಾಸಿಯಾಗಿರಲಾರ. ಈ ವಿಪತ್ತುಗಳು ಅಲ್ಲಾಹನ ಸಂದೇಶವಾಹಕರಿಗೆ ಬಂದೆರಗುವಾಗ ಅವು ಅವರಿಗೆ ಬಹುಮಾನಗಳ ಶುಭವಾರ್ತೆಗಳನ್ನು ನೀಡುತ್ತವೆ. ಆದರೆ ಇದೇ ವಿಪತ್ತುಗಳು ಕೆಟ್ಟ ಜನರಿಗೆ ಬಂದೆರಗುವಾಗ ಅವು ಅವರನ್ನು ನಾಶಮಾಡುತ್ತದೆ. ಆದುದರಿಂದ ವಿಪತ್ತುಗಳು ಬಂದೆರಗುವಾಗ **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳಬೇಕು. ವಿಪತ್ತುಗಳ ಕಾಲದಲ್ಲಿ ಅಲ್ಲಾಹನ ಸಂಪ್ರೀತಿಯನ್ನು ಅಪೇಕ್ಷಿಸಬೇಕು. ಸತ್ಯವಿಶ್ವಾಸಿಯ ಜೀವಿತವು ಎರಡು ಭಾಗಗಳನ್ನು ಹೊಂದಿದೆ. ಸತ್ಯವಿಶ್ವಾಸಿ ಸತ್ಕರ್ಮ ಮಾಡುವಾಗ ಅವನಿಗೆ ಪ್ರತಿಫಲ ಸಿಗುತ್ತದೆ. ಆದರೆ ಅವನು ಸಹನೆ ದೋರುವಾಗ ಅವನಿಗೆ ಸಿಗುವ ಪ್ರತಿಫಲ ಅಸಂಖ್ಯಾತವಾಗಿರುತ್ತದೆ. (ಎಂದರೆ ಸತ್ಕರ್ಮಕ್ಕೆ ಪ್ರತಿಫಲ ಸಿಗುತ್ತದೆ. ಆದರೆ ಸಹನೆ ದೋರಿದರೆ ಸಿಗುವ ಪ್ರತಿಫಲ ಬಹಳ ಹೆಚ್ಚಾಗಿರುತ್ತದೆ.) ಅಲ್ಲಾಹನು ಹೇಳುತ್ತಾನೆ: ಈ ಜನರೇ ಸಹನೆ ದೋರುವವರಾಗಿದ್ದಾರೆ. ಈ ಜನರೇ ಅಲ್ಲಾಹನನ್ನು ಮನವರಿಕೆ ಮಾಡಿದವರಾಗಿದ್ದಾರೆ. ಅಲ್ಲಾಹನು ಈ ಜನರ ಜೀವಿತವನ್ನು ಎರಡು ಭಾಗಗಳಾಗಿ ಮಾಡಿದ್ದಾನೆ. ಕೆಲವೊಮ್ಮೆ ಅವನು ಸತ್ಯವಿಶ್ವಾಸಿಗಳ ಪ್ರಾರ್ಥನೆ ಅಂಗೀಕರಿಸುತ್ತಾನೆ. **ಅದ್‌ಊನಿ ಅಸ್ತಜಿಬ್‌ಲಕುಮ್ –** ನನ್ನನ್ನು ಕರೆದು ಪ್ರಾರ್ಥಿಸಿದರೆ ನಾನು ನಿಮ್ಮ ಪ್ರಾರ್ಥನೆ ಅಂಗೀಕರಿಸುತ್ತೇನೆ ಎಂಬಂತೆ. ಮತ್ತೆ ಕೆಲವೊಮ್ಮೆ ಅಲ್ಲಾಹನು ತನ್ನ ನಿರ್ಧಾರವನ್ನು ಸತ್ಯವಿಶ್ವಾಸಿಗಳು ಅನುಸರಿಸಬೇಕೆಂದು ಬಯಸುತ್ತಾನೆ. **ವಲನಬ್‌ಲುವನ್ನಕುಮ್ ಬಿ ಶೈಯಿನ್ ಮಿನಲ್‌ಖೌಫಿ–** ನಿಶ್ಚಯವಾಗಿಯೂ ನಾವು ನಿಮ್ಮನ್ನು ಪರೀಕ್ಷಿಸುವೆವು ಎಂದು ಹೇಳಿರುವಂತೆ. ಆದುದರಿಂದ ಈ ವಿಷಯವನ್ನು ಮನವರಿಕೆ ಮಾಡಿಕೊಳ್ಳುವುದು ಸತ್ಯವಿಶ್ವಾಸಿಗೆ ಆವಶ್ಯಕವಾಗಿದೆ. ಒಂದು ವಿಷಯದ ಬಗ್ಗೆ ಮಾತ್ರ ಒತ್ತು ನೀಡಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ವಿಪತ್ತು ಬಂದೆರಗಿದಾಗ ಸತ್ಯವಿಶ್ವಾಸಿ ವ್ಯಾಕುಲಚಿತ್ತನಾಗಬಾರದು. ಅವನು ಪ್ರವಾದಿಗಿಂತ ಉನ್ನತ ಸ್ಥಾನ ಗಳಿಸಿದವನಲ್ಲ. ವಾಸ್ತವಿಕವಾದುದು ಏನೆಂದರೆ ವಿಪತ್ತು ಬಂದೆರಗಿದಾಗ ಒಂದು ರೀತಿಯ ಪ್ರೀತಿಯ ಕಾರಂಜಿ ಉಕ್ಕಿ ಹರಿಯುತ್ತದೆ. ಸತ್ಯವಿಶ್ವಾಸಿಗೆ ಸಾವಿರಾರು ರೀತಿಯ ರಸಾನುಭೂತಿ ಲಭಿಸದೆ ಇರುವ ಯಾವ ವಿಪತ್ತು ಸಹ ಇರುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ದೇವನಿಗೆ ಪ್ರಿಯರಾದವರಿಗೆ ವಿಪತ್ತು ಬಂದೆರಗುವುದು ಅವರ ಪಾಪ ಕೃತ್ಯಗಳ ಕಾರಣದಿಂದಲ್ಲ. ಸತ್ಯವಿಶ್ವಾಸಿಯ ನಿಜವಾದ ವ್ಯಕ್ತಿತ್ವ ವಿಪತ್ತಿನ ಕಾಲದಲ್ಲಿ ಬಹಿರಂಗವಾಗುತ್ತದೆ. ನೀವು ನೋಡಿರಿ, ಕಷ್ಟಗಳ ಮತ್ತು ಸಹಾಯಗಳ ಕಾಲದಲ್ಲಿ ಹಝ್ರತ್ ಪೈಗಂಬರ್

ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸದ್ಗುಣಗಳು ಹೇಗೆ ಪ್ರಕಟವಾದುವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಷ್ಟಗಳು ಸಂಭವಿಸದಿರುತ್ತಿದ್ದರೆ ನಾವು ಅವರ ಸದ್ಗುಣಗಳ ಬಗ್ಗೆ ಇಂದು ಏನು ಹೇಳಲು ಸಾಧ್ಯವಿತ್ತು. ಸತ್ಯವಿಶ್ವಾಸಿಗಳಿಗೆ ಸಂಭವಿಸುವ ಕಷ್ಟಗಳನ್ನು ಅನ್ಯರು ನಿಶ್ಚಯವಾಗಿಯೂ ಕಷ್ಟವೆಂದೇ ಪರಿಗಣಿಸುತ್ತಾರೆ. ಆದರೆ ಸತ್ಯವಿಶ್ವಾಸಿ ಅವುಗಳನ್ನು ಕಷ್ಟಗಳೆಂದು ಪರಿಗಣಿಸುವುದಿಲ್ಲ. ಆದುದರಿಂದ ಮನುಷ್ಯನು ಸತ್ಯವಾದ ತೌಬ ಮಾಡಬೇಕು (ಪಶ್ಚಾತ್ತಾಪಗೊಂಡು ಪ್ರಾರ್ಥಿಸಬೇಕು). ತೌಬ ಪ್ರಾರ್ಥನೆ ಮಾಡುವ ಮೂಲಕ ಒಂದು ನವಜೀವನ ಲಭಿಸುವುದೆಂದು ತಿಳಿದುಕೊಳ್ಳಿರಿ. ತೌಬದ ನಿಜವಾದ ಫಲ ಲಭಿಸಬೇಕಾದರೆ ಸತ್ಕರ್ಮಗಳನ್ನು ಮಾಡಿ ತೌಬವನ್ನು ಪರಿಪೂರ್ಣಗೊಳಿಸಬೇಕು. ಸತ್ಯವಿಶ್ವಾಸ ಒಂದು ಗಿಡವಾಗಿದೆ. ಸತ್ಕರ್ಮಗಳ ಮೂಲಕ ಅದಕ್ಕೆ ನೀರು ಹಾಕಬೇಕಾಗಿದೆ. ಸತ್ಯವಿಶ್ವಾಸ ಪೂರ್ಣವಾಗಲು ಸತ್ಕರ್ಮಗಳು ಅತ್ಯಂತ ಹೆಚ್ಚು ಆವಶ್ಯಕವಾಗಿವೆ. ವಿಶ್ವಾಸದೊಂದಿಗೆ ಸತ್ಕರ್ಮಗಳಿಲ್ಲವಾದರೆ ಗಿಡವು ಒಣಗಿ ಹೋಗುವುದು ಹಾಗೂ ನಷ್ಟವನ್ನು ಅನುಭವಿಸಬೇಕಾಗಿ ಬರುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಸತ್ಯವಿಶ್ವಾಸಿಗಳಾಗಿದ್ದರೆ ಪರೀಕ್ಷೆಗಳನ್ನು ಕೆಟ್ಟದೆಂದು ಭಾವಿಸಬೇಡಿರಿ. ಪರಿಪೂರ್ಣವಾಗಿ ವಿಶ್ವಾಸಿಯಾಗಿಲ್ಲದವನು ಮಾತ್ರ ಪರೀಕ್ಷೆಗಳನ್ನು ಕೆಟ್ಟದೆಂದು ಭಾವಿಸುತ್ತಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: ನಾವು ನಿಮ್ಮನ್ನು ಜೀವಹಾನಿ, ಸಂಪತ್ತಿನ ಹಾನಿ, ಮಕ್ಕಳ ಮೂಲಕ ಮತ್ತು ಕೃಷಿನಾಶದ ಮೂಲಕ ಪರೀಕ್ಷಿಸುವೆವು. ಆದರೆ ಅಂತಹ ಸಂದರ್ಭಗಳಲ್ಲಿ ಸಹನೆದೋರಿ ಅಲ್ಲಾಹನಿಗೆ ಕೃತಜ್ಞರಾಗಿರುವವರಿಗೆ ಶುಭವಾರ್ತೆ ನೀಡು. ಅವರಿಗೆ ಅಲ್ಲಾಹನ ಅನುಗ್ರಹದ ಬಾಗಿಲು ವಿಶಾಲವಾಗಿದೆ ಮತ್ತು ಅವರಿಗೆ ಅಲ್ಲಾಹನ ಅನುಗ್ರಹ ದೊರಕುವುದು. ಅವರು ಅಂತಹ ಸಂದರ್ಭದಲ್ಲಿ ಹೇಳುತ್ತಾರೆ: **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ನಮಗೆ ದೊರೆತ ಎಲ್ಲ ಸಾಮಗ್ರಿಗಳು ಅಲ್ಲಾಹನಿಂದಲೇ ದೊರೆತುದಾಗಿವೆ. ಕೊನೆಗೆ ಮರಳಬೇಕಾದುದು ಅಲ್ಲಾಹನ ಕಡೆಗೆಯೇ ಆಗಿದೆ. ಯಾವುದೇ ನಷ್ಟದ ಬಗ್ಗೆ ವ್ಯಾಕುಲತೆ ಅವರ ಹೃದಯವನ್ನು ಪೀಡಿಸದು. ಅವರು ದೇವನ ಸಂಪ್ರೀತಿಯ ಸ್ಥಾನದಲ್ಲಿ ಜೀವಿಸುತ್ತಾರೆ. ಇಂತಹ ಜನರು ಸಹನೆ ದೋರುವವರಾಗಿರುತ್ತಾರೆ. ಸಹನೆ ದೋರುವವರಿಗೆ ಅಲ್ಲಾಹನು ಅಪರಿಮಿತವಾದ ಪ್ರತಿಫಲ ನೀಡುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಕೆಲವು ಜನರು ಅಲ್ಲಾಹನ ಬಗ್ಗೆ ಆಕ್ಷೇಪಿಸುತ್ತಾರೆ. ಅಲ್ಲಾಹನು ನಮ್ಮ ಪ್ರಾರ್ಥನೆ ಅಂಗೀಕರಿಸುವುದಿಲ್ಲ ಎಂದು. ಅವರು ಅಲ್ಲಾಹನಿಗೆ ಪ್ರಿಯರಾದವರ ಬಗ್ಗೆ ಸಹ ದೋಷಾರೋಪ ಮಾಡುತ್ತಾರೆ. ಅವರ ಇಂತಿಂತಹ ಆ ಪ್ರಾರ್ಥನೆಗಳು ಅಂಗೀಕಾರಗೊಂಡಿಲ್ಲ ಎಂದು ಹೇಳುತ್ತಾರೆ. ವಾಸ್ತವಿಕವಾಗಿ ಈ ತಿಳಿಗೇಡಿಗಳು ಅಲ್ಲಾಹನ ನಿಯಮಗಳ ಬಗ್ಗೆ ಅಜ್ಞಾನಿಗಳಾಗಿರುತ್ತಾರೆ. ಆದರೆ, ಅದಕ್ಕೆ ವಿಧೇಯರಾದವರಿಗೆ ಅಲ್ಲಾಹನ ನಿಯಮದ ಬಗ್ಗೆ ಚೆನ್ನಾಗಿ ತಿಳಿದಿರುತ್ತದೆ. ಅಲ್ಲಾಹನು ಎರಡು ರೀತಿಗಳಲ್ಲಿ ವರ್ತಿಸುತ್ತಾನೆ. ಅವನು ಕೆಲವು ಪ್ರಾರ್ಥನೆಗಳನ್ನು ಅಂಗೀಕರಿಸುತ್ತಾನೆ. ಮತ್ತೆ ಕೆಲವು ತನ್ನ ಇಚ್ಛೆ ಪ್ರಕಾರ ನಿರ್ಧರಿಸುತ್ತಾನೆ. ಇದನ್ನು ಒಪ್ಪಿಕೊಳ್ಳುವುದೇ ಸತ್ಯವಿಶ್ವಾಸವಾಗಿದೆ. ನೀವು ಒಂದು ಭಾಗದ ಬಗ್ಗೆ ಮಾತ್ರ ಒತ್ತುನೀಡುವವರಾಗಬೇಡಿರಿ. ನೀವು ಅಲ್ಲಾಹನನ್ನು ವಿರೋಧಿಸಿ ಅವನು ನಿಗದಿಪಡಿಸಿದ ನಿಯಮಗಳನ್ನು ಮುರಿಯಲು ಪ್ರಯತ್ನಿಸುವವರಾಗಬೇಡಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಮನುಷ್ಯನಿಗೆ ಅಭಿವೃದ್ಧಿ ಹೊಂದಲು ಎರಡು ಮಾರ್ಗಗಳು ಮಾತ್ರವಿದೆ. ಮೊದಲನೆಯದು ನಮಾಝ್, ಉಪವಾಸ, ಝಕಾತ್, ಹಜ್ ಮೊದಲಾದ ಶರೀಅತ್ ನಿಯಮಗಳನ್ನು ಪಾಲಿಸುವುದು. ಅವುಗಳನ್ನು ಅಲ್ಲಾಹನ ಆಜ್ಞೆ ಪ್ರಕಾರ ಮನುಷ್ಯನು ಸ್ವತಃ ಮಾಡುತ್ತಾನೆ. ಅವರು ಸ್ವಯಂ ಇವುಗಳನ್ನು ಮಾಡುವುದರಿಂದ ಅದರಲ್ಲಿ ಕೆಲವು ಸಾರಿ ಉದಾಸೀನತೆ ತೋರುತ್ತಾರೆ. ಕೆಲವು ಸಲ ಅವುಗಳನ್ನು ಮಾಡುವ ಸುಲಭ ವಿಧಾನವನ್ನು ಕೈಗೊಳ್ಳುತ್ತಾರೆ. ಆದುದರಿಂದ ಅಲ್ಲಾಹನು ಮನುಷ್ಯನು ಪರಿಪೂರ್ಣನಾಗಲು ಇನ್ನೊಂದು ಮಾರ್ಗವನ್ನು ಸಹ ಏರ್ಪಡಿಸಿರುವನು. ಅವನು ಹೇಳುತ್ತಾನೆ: ನಾವು ನಿಮ್ಮನ್ನು ಪರೀಕ್ಷಿಸುತ್ತಾ ಇರುವೆವು ಎಂದು. ಕೆಲವು ಸಾರಿ ಭಯಪಡಿಸಿ, ಕೆಲವು ಸಾರಿ ಹಸಿವು ಮೂಲಕ, ಕೆಲವು ಸಾರಿ ಸಂಪತ್ತು ಜೀವ ಮತ್ತು ಫಲ ವಸ್ತುಗಳು ಹಾನಿಯಾಗುವ ಮೂಲಕ. ಈ ಎಲ್ಲ ಕಷ್ಟಗಳನ್ನು, ವಿಪತ್ತುಗಳನ್ನು, ಹಸಿವನ್ನು ಸಹಿಸಿ **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳುವವರಿಗೆ ಶುಭವಾರ್ತೆ ನೀಡು ಎಂದು ಅಲ್ಲಾಹನು ಹೇಳುತ್ತಾನೆ. ಅವರಿಗೆ ದೊಡ್ಡ ಪ್ರತಿಫಲಗಳು, ಅಲ್ಲಾಹನ ಅನುಗ್ರಹಗಳು ಮತ್ತು ಅವನ ವಿಶಿಷ್ಟ ಬಹುಮಾನಗಳಿವೆ. ಆದುದರಿಂದ ನೀವು ಈ ವಿಷಯವನ್ನು ಯಾವಾಗಲೂ ನಿಮ್ಮ ಮುಂದೆ ಇರಿಸಬೇಕು. ನಮ್ಮನ್ನು ದೊಡ್ಡ ದೊಡ್ಡ ನಷ್ಟಗಳಿಗೂ ಪರೀಕ್ಷೆಗಳಿಗೂ ಅಲ್ಲಾಹನು ಏಕೆ ಗುರಿ ಪಡಿಸುತ್ತಾನೆ ಎಂದು ನೀವು ಹೃದಯದಲ್ಲಿ ಚಿಂತಿಸಬಾರದು. ವಿರೋಧಿಗಳು ಮಾಡುವ ಅಪಹಾಸ್ಯ ಮತ್ತು 'ಅಲ್ಲಾಹನು ನಿಮ್ಮ ಜೊತೆಗಿದ್ದರೆ ನಿಮಗೆ ನಷ್ಟ ಸಂಭವಿಸಿದ್ದು ಏಕೆ?' ಎಂಬ ಮಾತುಗಳಿಂದ ನಾವು ಗಾಬರಿಗೊಳ್ಳಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖಗಳಿಂದ ಸ್ಪಷ್ಟವಾಗುವ ಕೆಲವು ಮುಖ್ಯ ಅಂಶಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ಹೇಳುತ್ತಾರೆ: ನೀವು ಯಾವಾಗಲೂ ನೆನಪಿಡಬೇಕಾದುದೇನೆಂದರೆ ಕಷ್ಟಗಳು ಅಲ್ಲಾಹನ ಸಂದೇಶವಾಹಕರಿಗೂ ಅವನಿಗೆ ಪ್ರಿಯರಾದ ಜನರಿಗೂ ಸಂಭವಿಸುವ ಹಾಗೆಯೇ ಪ್ರವಾದಿಗಳನ್ನು ಸರಿಯಾಗಿ ಅನುಸರಿಸುವ ಅವರ ಜಮಾಅತ್‌ನ ಮೇಲೆಯೂ ಸಂಭವಿಸುತ್ತದೆ. ಅಲ್ಲಾಹನು ಅವರನ್ನು ಇಂತಹ ಕಷ್ಟಗಳಿಗೆ ಒಳಪಡಿಸುವುದು ಅವರಿಗೆ ಶಿಕ್ಷೆ ನೀಡುವ ಅಥವಾ ಅವರನ್ನು ಸಂಕಷ್ಟಕ್ಕೆ ಗುರಿಪಡಿಸುವ ಉದ್ದೇಶದಿಂದ ಅಲ್ಲ. ಅಲ್ಲಾಹನು ಅವುಗಳ ಮೂಲಕ ಅವರಿಗೆ ಪಾರಿತೋಷಕಗಳ ಶುಭವಾರ್ತೆ

ನೀಡುತ್ತಾನೆ. ಆದರೆ ಈ ರೀತಿಯ ಕಷ್ಟಗಳು ಪ್ರವಾದಿಗಳ ಶತ್ರುಗಳ ಮೇಲೆ ಮತ್ತು ಪ್ರವಾದಿಗಳ ಜಮಾಅತಿನ ಶತ್ರುಗಳ ಮೇಲೆ ಮತ್ತು ಕೆಟ್ಟವರ ಮೇಲೆ ಬಂದೆರಗುವಾಗ ಅದು ಅವರ ನಾಶಕ್ಕೋಸ್ಕರ ಬಂದೆರಗಿ ಅವರನ್ನು ನಾಶ ಮಾಡುತ್ತದೆ. ಕಷ್ಟಕಾಲದಲ್ಲಿ ಸಹನೆ ದೋರುವವರಿಗೆ ಅಲ್ಲಾಹನು ಅಪರಿಮಿತವೂ ಅಸಂಖ್ಯಾತವೂ ಆಗಿರುವ ಪ್ರತಿಫಲಗಳನ್ನು ನೀಡಿ ಅವರನ್ನು ಅದರ ವಾರೀಸುದಾರರನ್ನಾಗಿ ಮಾಡುತ್ತಾನೆ. ಆದುದರಿಂದ ಸತ್ಯವಿಶ್ವಾಸಿಯಾದವನು ಸಹನೆಯ ಅರ್ಥವನ್ನು ಗ್ರಹಿಸಬೇಕಾದ ಆವಶ್ಯಕತೆ ಇದೆ.

ಇದರ ಅರ್ಥ ಯಾವುದಾದರೂ ನಷ್ಟ ಸಂಭವಿಸಿದಾಗ ದುಃಖಿಸಬಾರದು ಎಂದಲ್ಲ. ಬದಲಾಗಿ, ಯಾವುದೇ ನಷ್ಟ ಮತ್ತು ಕಷ್ಟ ತನ್ನ ಮೇಲೆ ಪ್ರಭಾವ ಬೀರಿ ಪ್ರಜ್ಞೆ ಕಳಕೊಂಡವನಂತೆ ನಿರಾಶನಾಗಿ ಕುಳಿತುಕೊಳ್ಳಬಾರದು ಮತ್ತು ಯಾವುದೇ ಕೆಲಸ ಮಾಡದೆ ಸುಮ್ಮನೆ ಇದ್ದುಬಿಡಬಾರದು ಎಂದಾಗಿದೆ. ಸ್ವಲ್ಪಮಟ್ಟಿಗೆ ದುಃಖಿಸುವುದು ಸಹ ಆವಶ್ಯಕವಾಗಿದೆ. ನಷ್ಟವಾಗುವಾಗ ಅದರ ಬಗ್ಗೆ ವ್ಯಾಕುಲಪಡಬೇಕಾಗುತ್ತದೆ. ಅದರೊಂದಿಗೆ ದೃಢ ನಿಶ್ಚಯದಿಂದ ಮುಂದಿನ ಮಜಲುಗಳಿಗೆ ತಲಪಲು ಹೆಜ್ಜೆ ಹಾಕುತ್ತಾ ಹಿಂದೆಂದಿಗಿಂತಲೂ ಹೆಚ್ಚು ಪ್ರಯತ್ನ ಮಾಡುವ ದೃಢ ನಿರ್ಧಾರ ಮತ್ತು ಕೆಲಸ ಮಾಡುವ ಆವಶ್ಯಕತೆ ಇದೆ. ಸಹನೆ ದೋರುವವನಿಗೆ ಮಾತ್ರವೇ ಪ್ರಾರ್ಥನೆಯ ವಾಸ್ತವಿಕತೆ ತಿಳಿಯುತ್ತದೆ ಎಂದು ಸಹ ನೆನಪಿಡಬೇಕಾಗಿದೆ. ಕೆಲವು ಸಾರಿ ಅಲ್ಲಾಹನು ಪ್ರಾರ್ಥನೆಗಳನ್ನು ತಕ್ಷಣ ಅಂಗೀಕರಿಸುತ್ತಾನೆ. ಕೆಲವು ಸಾರಿ ಅವನು ನಾವು ಉದ್ದೇಶಿಸಿದ ಹಾಗೆ ಪ್ರಾರ್ಥನೆ ಅಂಗೀಕರಿಸುವುದಿಲ್ಲ. ಸತ್ಯವಿಶ್ವಾಸಿ ಯಾವಾಗಲೂ ಅಲ್ಲಾಹನ ಇಷ್ಟವನ್ನು ಅಂಗೀಕರಿಸಬೇಕು. ಅಲ್ಲಾಹನ ಯಾವುದೇ ಕೆಲಸದ ಬಗ್ಗೆ ಆಕ್ಷೇಪವೆತ್ತಬಾರದು. ಇದೇ ನಿಜವಾದ ಸಹನೆಯಾಗಿದೆ. ಇಂತಹ ಸಹನೆದೋರುವ ತನ್ನ ದಾಸರಿಗೆ ಅಲ್ಲಾಹನು ಹೆಚ್ಚು ಹೆಚ್ಚಾಗಿ ಅನುಗ್ರಹ ನೀಡುತ್ತಾನೆ. ಬಹುಮಾನಗಳನ್ನು ನೀಡುತ್ತಾನೆ. ಅಲ್ಲಾಹನ ವಾಸ್ತವಿಕ ದಾಸರು ಕಷ್ಟಕಾಲದಲ್ಲೂ ರಸಾನುಭೂತಿ ಪಡೆಯುತ್ತಾರೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ. ಏಕೆಂದರೆ ಅವರ ಕಷ್ಟಗಳ ಹಿಂದೆ ಅಸಂಖ್ಯಾತ ಅನುಗ್ರಹಗಳು ಬರುತ್ತವೆ ಎಂಬುದನ್ನು ಅವರು ಕಾಣುತ್ತಾರೆ. ಸತ್ಯವಿಶ್ವಾಸಿಗಳಿಗೆ ಕಷ್ಟ ಉಂಟಾಗುವುದು ಅವರ ಪಾಪದೋಷಗಳ ಕಾರಣದಿಂದಲ್ಲ. ಅವು ಅಲ್ಲಾಹನ ಕಡೆಯಿಂದ ಬರುವ ಪರೀಕ್ಷೆಗಳಾಗಿವೆ. ಅಲ್ಲಾಹನ ದಾಸರು ಪ್ರತಿಯೊಂದು ಪರಿಸ್ಥಿಯಲ್ಲೂ ಅಲ್ಲಾಹನ ಇಷ್ಟದ ಬಗ್ಗೆ ಸಂಪ್ರೀತರಾಗಿರುತ್ತಾರೆ ಎಂಬುದನ್ನು ಲೋಕದ ಜನರು ತಿಳಿದುಕೊಳ್ಳಲು ಈ ಪರೀಕ್ಷೆಗಳು ಬರುತ್ತವೆ. ಅಲ್ಲಾಹನಿಗೆ ಅತ್ಯಂತ ಪ್ರಿಯರಾದವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಿದ್ದರು. ಅವರಿಗೆ ಸಹ ಅನೇಕ ಕಷ್ಟಗಳು ಸಂಭವಿಸಿದುವು. ಅವರಿಗೆ ವೈಯಕ್ತಿಕವಾಗಿಯೂ ಕಷ್ಟ ಸಂಭವಿಸಿತ್ತು. ಅವರ ಜಮಾಅತಿಗೂ ಕಷ್ಟ ಸಂಭವಿಸಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂಭವಿಸಿದ ಕಷ್ಟಗಳ ಹಾಗೆ ಬೇರೆ ಯಾರಿಗೂ ಸಂಭವಿಸಿರಲಿಲ್ಲ. ಆದರೆ ಪ್ರತಿಯೊಂದು ಕಷ್ಟದಲ್ಲಿ ಅವರ ಸಹನೆ ಮತ್ತು ದೇವೇಚ್ಛೆಯ ಬಗ್ಗೆ ಸಂತೃಪ್ತಿಯ ಉದಾಹರಣೆ ಲೋಕದಲ್ಲಿ ಬೇರೆ ಎಲ್ಲಿಯೂ ಕಾಣಿಸುವುದಿಲ್ಲ. ಅವರ ಶ್ರೇಷ್ಠ ಸ್ವಭಾವಗುಣಗಳು ಎಲ್ಲಾ ಮುಸ್ಲಿಮರಿಗೂ ಉತ್ತಮ ಮಾದರಿಯಾಗಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಸತ್ಯವಾಗಿ ತೌಬ ಮಾಡಬೇಕೆಂದೂ ಅದು ನಿಮ್ಮ ವಿಜಯಕ್ಕೆ ಮತ್ತು ಪರೀಕ್ಷೆಗಳನ್ನು ದಾಟಿ ಹೋಗಿ ಜಯಗಳಿಸಲಿಕ್ಕೆ ಅತ್ಯಂತ ಆವಶ್ಯಕವೆಂದೂ ಹೇಳಿರುವರು. ಸತ್ಯವಿಶ್ವಾಸಿ ತಮ್ಮ ಕಾರ್ಯಗಳಲ್ಲಿ ಮುಂದುವರಿಯುವುದರೊಂದಿಗೆ ತೌಬ ಸಹ ಮಾಡುತ್ತಾ ಇರಬೇಕು. ಪ್ರತಿಯೊಂದು ಕಷ್ಟದ ಸಮಯದಲ್ಲಿ ಅಲ್ಲಾಹನ ಮುಂದೆ ಬಾಗಿ ತನ್ನ ಬಲಹೀನತೆ ಬಗ್ಗೆ ನಿವೇದಿಸಬೇಕು. ಮತ್ತು ಉತ್ತಮ ನಡೆವಳಿಕೆಗಳಿಂದ ತನ್ನ ಸುಧಾರಣೆಯ ಶೃಂಖಲೆಯನ್ನು ಜಾರಿಯಲ್ಲಿರಿಸಬೇಕು. ಒಬ್ಬ ತೋಟಗಾರ ಗಿಡಗಳನ್ನು ನೆಟ್ಟು ನೀರು ಹಾಕುವ ಹಾಗೆ ಸತ್ಯವಿಶ್ವಾಸಿಗಳೂ ವಿಶ್ವಾಸವೆಂಬ ಗಿಡಕ್ಕೆ ಸತ್ಕರ್ಮಗಳ ನೀರು ಹಾಯಿಸುತ್ತಿರಬೇಕು. ಹೀಗೆ ಮಾಡುವಿರಾದರೆ ಇದು ಸತ್ಯವಿಶ್ವಾಸಿಗಳು ಜಯಗಳಿಸುವ ಮಾರ್ಗವಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ವಿರೋಧಿಗಳು ಹೇಳುವ ಮಾತಿನಿಂದ ನೀವು ಗಾಬರಿಗೊಳ್ಳಬಾರದು. ಜನರು ಅಲ್ಲಾಹನ ಔಲಿಯಾಗಳ ಬಗ್ಗೆ ಸಹ ಆಕ್ಷೇಪಿಸುತ್ತಾರೆ. ಅವರ ಇಂತಿಂತಹ ಪ್ರಾರ್ಥನೆ ಅಂಗೀಕಾರಗೊಂಡಿಲ್ಲ ಎಂದು ಹೇಳುತ್ತಾರೆ. ಇಂತಹ ಜನರು ದೈವಿಕ ನಿಯಮದ ಬಗ್ಗೆ ಅಜ್ಞಾನಿಗಳಾಗಿದ್ದಾರೆ. ಅಲ್ಲಾಹನು ಕೆಲವು ಸಾರಿ ಪ್ರಾರ್ಥನೆ ಅಂಗೀಕರಿಸುತ್ತಾನೆ. ಕೆಲವು ಸಾರಿ ತನ್ನ ನಿರ್ಧಾರ ಪ್ರಕಾರ ವರ್ತಿಸುತ್ತಾನೆ. ಇದು ಅಲ್ಲಾಹನ ನಿಯಮವಾಗಿದೆ. ಆದುದರಿಂದ ನೀವು ಅಲ್ಲಾಹನ ನಿಯಮಗಳನ್ನು ಮುರಿಯುವವರಾಗಬಾರದೆಂದು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ. ಸತ್ಯವಿಶ್ವಾಸಿಗಳಿಗೆ ವಿಪತ್ತುಗಳೂ ಕಷ್ಟಗಳೂ ಯಾವಾಗಲೂ ಇರುವುದಿಲ್ಲ. ಅವು ಬರುತ್ತವೆ, ಹೋಗುತ್ತವೆ. ಆದುದರಿಂದ ನೀವು ಸಹನೆ, ಪ್ರಾರ್ಥನೆ ಮತ್ತು ಸತ್ಕರ್ಮಗಳ ಮೂಲಕ ಅಲ್ಲಾಹನ ಅನುಗ್ರಹಗಳನ್ನು ಹೀರುವವರಾಗಿರಿ. ನಿಮಗೆ ವಿಪತ್ತು ಬಂದೆರಗುವಾಗ ಮತ್ತು ನಿಮಗೆ ಕಷ್ಟ ಉಂಟಾಗುವಾಗ ನೀವು **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳುವವರಾಗಿರಿ.

ಕೆಲವು ದಿನಗಳ ಹಿಂದೆ ಬೈತುಲ್ ಫುತೂಹ್ ಮಸ್‌ಜಿದ್‌ಗೆ ತಾಗಿಕೊಂಡಿರುವ ಎರಡು ಹಾಲ್‌ಗಳಿಗೆ ಬೆಂಕಿಯ ಕಾರಣ ಬಹಳ ಹಾನಿ ಉಂಟಾಯಿತು. ಅದು ಬಹಳ ಭಯಾನಕ ಅಗ್ನಿಬಾಧೆ ಆಗಿತ್ತು. ಇದರ ಬಗ್ಗೆ ವಿವಿಧ ಟಿ.ವಿ. ಚ್ಯಾನಲ್‌ಗಳು ಮತ್ತು ಇತರ ಮಾಧ್ಯಮಗಳು ವಾರ್ತೆಗಳನ್ನು ನೀಡಿದುವು. ಆದರೆ ದ್ವೇಷಾಸೂಯೆ ಭರಿತರಾದ ಕೆಲವು ಜನರು ಬಹಳ ಸಂತೋಷ ಸೂಚಿಸಿದರು. ಕೇವಲ ಎರಡು ಹಾಲ್‌ಗಳಿಗೆ ಮಾತ್ರ ಬೆಂಕಿ ತಗಲಿತು. ಮಸ್‌ಜಿದ್‌ಗೆ ಏಕೆ ಬೆಂಕಿ ತಗಲಲಿಲ್ಲ ಎಂದು ಅವರು

ವ್ಯಾಕುಲ ಪಟ್ಟರು. ಇದು ಇಂದಿನ ಕೆಲವು ಮುಸ್ಲಿಮರ ಸ್ಥಿತಿಯಾಗಿದೆ. ಆದರೆ ಎಲ್ಲರೂ ಹೀಗೆ ಅಲ್ಲ. ಕೆಲವು ಪ್ರದೇಶಗಳ ಮುಸ್ಲಿಮರು ನಮ್ಮೊಂದಿಗೆ ಸಹಾನುಭೂತಿ ಪ್ರಕಟಿಸಿದರು. ಈ ಘಟನೆಯು ನಮ್ಮ ಜಮಾಅತಿನ ಬಗ್ಗೆ ಲೋಕಕ್ಕೆ ವಿಶಾಲವಾದೊಂದು ಪರಿಚಯವನ್ನು ಮಾಡಿಕೊಟ್ಟಿತು. ಈ ಘಟನೆಯಿಂದ ಖಂಡಿತವಾಗಿಯೂ ನಮಗೆ ದುಃಖವಾಗಿದೆ. ಆದರೆ ನಾವು ಸಹನೆ ದೋರಿದೆವು ಮತ್ತು **ಇನ್ನಾಲಿಲ್ಲಾಹಿ** ಸಹ ಪಠಿಸಿದೆವು. ಈ ನಷ್ಟ ಮತ್ತು ಪರೀಕ್ಷೆಯ ಕಾಲದಲ್ಲಿ ಅಲ್ಲಾಹನು ಜಮಾಅತಿನ ಪರವಾಗಿ ಜನರನ್ನು ನಿಲ್ಲಿಸಿ 'ನಾನು ಅವರೊಂದಿಗೆ ಇದ್ದೇನೆ' ಎಂದು ಲೋಕಕ್ಕೆ ತೋರಿಸಿಕೊಟ್ಟನು.

ಬೆಂಕಿಯ ಕಾರಣವೇನೆಂದು ಪೋಲೀಸರಿಗೆ ಸಹ ಇಷ್ಟರ ತನಕ ಸ್ಪಷ್ಟವಾಗಿಲ್ಲ. ಕಾರಣ ಏನೇ ಇರಲಿ. ಇಲ್ಲಿನ ನಮ್ಮ ಮಸ್‌ಜಿದ್‌ನ ಕೆಲಸಗಾರರು ಮತ್ತು ಇಲ್ಲಿನ ವ್ಯವಸ್ಥೆಯ ಬಲಹೀನತೆಯ ಕಡೆಗೆ ಸಹ ಅದು ಸೂಚನೆ ನೀಡುತ್ತಿದೆ. ಇವರು ಬಹಳ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಬೇಕಾಗಿದೆ. ಕೆಲವು ಮುಸ್ಲಿಮರು ಸಂತೋಷಗೊಂಡು **ಸುಬ್‌ಹಾನಲ್ಲಾಹ್** ಪಠಿಸುತ್ತಿದ್ದಾರೆ. ಅವರು ಸುಬ್‌ಹಾನಲ್ಲಾಹ್ ಪಠಿಸುವುದು ಅಪಹಾಸ್ಯ ಮಾಡಲು ಮತ್ತು ಅಲ್ಲಾಹನ ಅಭಿಮಾನವನ್ನು ಉತ್ತೇಜಿಸಲಿಕ್ಕಾಗಿರುತ್ತದೆ. ಅವರು ಹಾಗೆ ಮಾಡುವುದಾದರೆ ಮಾಡುತ್ತಿರಲಿ. ಆದರೆ ಇನ್‌ಶಾಅಲ್ಲಾಹ್, ನಾವು ಇವುಗಳಿಗಿಂತ ಉತ್ತಮವಾದ ಮತ್ತು ಸುಂದರವಾದ ನಿರ್ಮಾಣಗಳನ್ನು ಮಾಡಿ ವಾಸ್ತವಿಕವಾಗಿ **ಸಬ್‌ಹಾನಲ್ಲಾಹ್** ಪಠಿಸುವೆವು. ಮತ್ತು **ಮಾಶಾಅಲ್ಲಾಹ್** ಎಂದು ಸಹ ಹೇಳುವೆವು. ನಾನು ಹೇಳಿದ ಹಾಗೆ ಸತ್ಯವಿಶ್ವಾಸಿಗಳನ್ನು ಪರೀಕ್ಷಿಸುವುದು ಅಲ್ಲಾಹನ ಸುನ್ನತ್ (ನಡೆವಳಿಕೆ) ಆಗಿದೆ. ಬೆಂಕಿ ಹಿಡಿಯಲು ಕಾರಣವೇನು, ಇದೆಲ್ಲಾ ಹೇಗಾಯಿತು ಎಂದು ಇಷ್ಟರ ತನಕ ತಿಳಿದು ಬಂದಿಲ್ಲ. ಯಾವುದಾದರೂ ಗೂಢ ಕಾರಸ್ಥಾನದ ಕಾರಣ ಅಥವಾ ಉದ್ಧಟತನದ ಕಾರಣ ಈ ಬೆಂಕಿ ಅನಾಹುತ ಸಂಭವಿಸಿದ್ದರೆ ಇಂತಹವುಗಳು ನಮ್ಮ ಜಮಾಅತಿನ ಅಭಿವೃದ್ಧಿಯನ್ನು ತಡೆಯಲಾರವು. ಆದರೆ, ಇಲ್ಲಿನ ವ್ಯವಸ್ಥಾಪಕರು ತಮ್ಮ ಬಲಹೀನತೆಗಳನ್ನು ಗುರುತಿಸಿ ಅವುಗಳ ಬಗ್ಗೆ ಚಿಂತಿಸಿ ಕಾರ್ಯಪ್ರವೃತ್ತರಾಗಲು ಈ ಘಟನೆ ಎಚ್ಚರಿಕೆ ನೀಡುವುದಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದದ ಪ್ರಾರಂಭ ಕಾಲದಿಂದಲೇ ಅವರ ವಿರುದ್ಧ ಗೂಢ ತಂತ್ರ ರೂಪಿಸುವ ಮತ್ತು ಬೆಂಕಿ ಹಚ್ಚುವ ಶೃಂಖಲೆ ಜಾರಿಯಲ್ಲಿದೆ. ಆದರೆ ಅದರ ಪರಿಣಾಮ ಏನಾಯಿತು? ನಮ್ಮ ಜಮಾಅತಿನ ಅಭಿವೃದ್ಧಿ ನಮಗೆ ಪ್ರತಿಯೊಂದು ಸ್ಥಳದಲ್ಲಿ ಕಾಣಿಸುತ್ತದೆ. ಒಂದು ಬೆಂಕಿ ಬಾಹ್ಯವಾಗಿ ಕಾಣಿಸುವುದಾಗಿದೆ. ಇನ್ನೊಂದು ಬೆಂಕಿ ದ್ವೇಷ ಅಸೂಯೆಗಳ ಮನುಷ್ಯನೊಳಗಿನ ಬೆಂಕಿಯಾಗಿದೆ. ಪ್ರತ್ಯಕ್ಷದಲ್ಲಿ ಈಗ ನಮ್ಮ ಮಸ್‌ಜಿದ್‌ಗೆ ತಾಗಿಕೊಂಡಿರುವ ಒಂದು ಭಾಗಕ್ಕೆ ಬೆಂಕಿ ಹಿಡಿದಿದೆ. ಆದರೆ ನಮ್ಮ ಈ ನಷ್ಟ ಇನ್‌ಶಾಅಲ್ಲಾಹ್ ಪರಿಹರಿಸಲ್ಪಡುವುದು. ನಾವು ಅಲ್ಲಾಹನ ಶುಭವಾರ್ತೆಗಳ ಪಾಲು ಪಡೆಯುವವರೂ ಆಗುವೆವು. ನಮ್ಮ ಸಹನೆ ಮತ್ತು ನಮ್ಮ ಪ್ರಾರ್ಥನೆ ಅಲ್ಲಾಹನ ತಂಪಾದ ನೆರಳಿಗೆ ನಮ್ಮನ್ನು ಕೊಂಡೊಯ್ಯುವುದು. ಆದರೆ ಬಾಹ್ಯವಾದ ಈ ಬೆಂಕಿಯಿಂದ ಶತ್ರುಗಳ ಅಸೂಯೆಯ ಬೆಂಕಿ ಪ್ರಜ್ವಲಿಸುತ್ತಿದೆ. ನಮ್ಮ ವಿರುದ್ಧ ಜ್ವಲಿಸಿದ ಈ ಬಾಹ್ಯ ಬೆಂಕಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶತ್ರುಗಳನ್ನು ಸುಡುತ್ತಾ ಇದೆ. ಎಂ.ಟಿ.ಎ.ಯು ಒಂದು ಭಾಗ ಇಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಬಹಳ ದೊಡ್ಡ ವಿಭಾಗ. ಆ ದಿನ ರಾಹೇ ಹುದಾ ಕಾರ್ಯಕ್ರಮ ಲೈವ್ ಆಗಿ ಬಿತ್ತರಗೊಳ್ಳಲಿಕ್ಕಿತ್ತು. ಎಂ.ಟಿ.ಎ. ಕಾರ್ಯಕರ್ತರು ತೀರ್ಮಾನಿಸಿದರು– ನಾವು ಸ್ಟುಡಿಯೋ ತಲಪಲು ಸಾಧ್ಯವಿಲ್ಲ. ಆದುದರಿಂದ ಇಂದು ಲೈವ್ ಕಾರ್ಯಕ್ರಮದ ಬದಲಾಗಿ ರಿಕಾರ್ಡಿಂಗ್ ಪ್ರಸಾರ ಮಾಡುವ ಎಂದು. ನನಗೆ ಈ ವಿಷಯ ತಿಳಿದಾಗ ನಾನು ಹೇಳಿದೆ: ಮಸ್‌ಜಿದ್ ಫಝ್ಲ್‌ನಿಂದ ಈ ಕಾರ್ಯಕ್ರಮ ನೇರ ಪ್ರಸಾರಗೊಳ್ಳುವುದು, ಅದನ್ನು ತಡೆಯುವ ಪ್ರಶ್ನೆಯೇ ಇಲ್ಲ ಎಂದು. ಅವರು ಸ್ವತಃ ಈ ರೀತಿ ತೀರ್ಮಾನ ಮಾಡಬಾರದಾಗಿತ್ತು. ಬದಲಾಗಿ ಅವರು ಕೂಡಲೇ ನನ್ನನ್ನು ಸಂಪರ್ಕಿಸಿ ಪ್ರೋಗ್ರಾಮ್ ಬಗ್ಗೆ ಏನು ಮಾಡಬೇಕೆಂದು ನನ್ನೊಡನೆ ಕೇಳಬೇಕಾಗಿತ್ತು. ಲೈವ್ ಪ್ರೋಗ್ರಾಮ್ ಬಿತ್ತರಿಸದೆ ಇದ್ದರೆ ಈ ಘಟನೆಯಿಂದ ನಮ್ಮ ಎಲ್ಲ ವ್ಯವಸ್ಥೆ ಅಸ್ತವ್ಯಸ್ತವಾಗಿದೆ ಎಂದು ಎಲ್ಲರೂ ತಿಳಿಯುವಂತಾಗುತ್ತಿತ್ತು.. ಆದರೆ ನಿಜವಾಗಿಯೂ ಹಾಗೇನೂ ಆಗಿರಲಿಲ್ಲ. ನಷ್ಟದ ಬಗ್ಗೆ ನಿರಾಶರಾಗಿ ಕುಳಿತುಕೊಳ್ಳುವುದು ನಮ್ಮ ಕೆಲಸವಲ್ಲ. ಅಥವಾ ನಮ್ಮ ಜವಾಬ್ದಾರಿಕೆಗಳನ್ನು ಮರೆತು ಕೇವಲ ತಮಾಷೆ ನೋಡಲು ನಿಂತು ಬಿಡುವುದು ಸಹ ನಮಗೆ ಸೇರಿದ್ದಲ್ಲ. ನಾವು ಕೂಡಲೇ ಅಲ್ಲಿಗೆ ಹೋಗಿ ತಕ್ಷಣ ಬದಲಿ ವ್ಯವಸ್ಥೆ ಮಾಡಬೇಕಾಗಿತ್ತು. ಹಾಗೆ ನಮ್ಮ ಕೈಲಾದುದನ್ನು ಮಾಡಿದ ನಂತರ ಉಳಿದುದನ್ನು ಅಲ್ಲಾಹನಿಗೆ ಬಿಡಬೇಕಾಗಿದೆ.

ಒಟ್ಟಿನಲ್ಲಿ ಇಂತಹ ಘಟನೆಗಳಿಂದ ನಮಗೆ ಎಂದೂ ಗಾಬರಿ ಆಗಲಿಲ್ಲ. ಗಾಬರಿ ಆಗಲೂ ಬಾರದು. ಈ ಘಟನೆ ನಮಗೆ ಒಂದು ಪರೀಕ್ಷೆಯಾಗಿದ್ದರೆ ನಾವು ಪ್ರತಿಜ್ಞೆ ಮಾಡಬೇಕು ಮತ್ತು ನಮ್ಮ ಕೆಲಸಗಳಿಂದ ಸಾಬೀತುಗೊಳಿಸಬೇಕು– ಅಲ್ಲಾಹನ ಮುಂದೆ ಬಾಗುತ್ತಾ ಪ್ರಾರ್ಥನೆ ಮಾಡುತ್ತಾ ಈ ಪರೀಕ್ಷೆಯಿಂದ ಜಯಶಾಲಿಗಳಾಗಿ ಹೊರಗೆ ಬರಬೇಕು. ಈ ನಷ್ಟ ನಮಗೆ ಹೇಗೆ ಸಂಭವಿಸಿದ್ದರೂ, ಯಾರಿಂದ ಸಂಭವಿಸಿದ್ದರೂ ನಮ್ಮ ಅಜಾಗರೂಕತೆಯ ಕಾರಣದಿಂದಲೇ ಸಂಭವಿಸಿದೆ. ಅಥವಾ ಆಕಸ್ಮಿಕ ಅಪಘಾತದ ರೂಪದಲ್ಲಿ ಸಂಭವಿಸಿದೆ. ಯಾವುದೇ ಕಾರಣದಿಂದ ಈ ಘಟನೆ ಸಂಭವಿಸಿದ್ದರೂ **ಇನ್‌ಶಾಅಲ್ಲಾಹ್** ನಾವೇ ಅಲ್ಲಾಹನ ಅನುಗ್ರಹದಿಂದ ಪುನಃ ಸುಂದರ ರೂಪದಲ್ಲಿ ಇದನ್ನು ಪುನರ್‌ನಿರ್ಮಿಸುವೆವು. ಈಗ ಅದರ ಬಗ್ಗೆ ಪ್ರತ್ಯೇಕವಾಗಿ ನಾನು ಏನಾದರೂ ಹೊಸ ಒಂದು ಅಪೇಕ್ಷೆಯನ್ನು ಜಮಾಅತಿನ ಮುಂದೆ ಇಡಬೇಕಾದ ಆವಶ್ಯಕತೆಯಿಲ್ಲ. ಜನರು, ಸ್ವಂತ ಇಷ್ಟದಿಂದ ಇದಕ್ಕಾಗಿ ಮುಂದೆ ಬರುತ್ತಿದ್ದಾರೆ. ಮಕ್ಕಳು ಸಹ ಇದಕ್ಕೋಸ್ಕರ ಚಂದ ನೀಡಲು ಪ್ರಾರಂಭಿಸಿದ್ದಾರೆ. ಮಕ್ಕಳು ಸ್ವತಃ ಸಂಗ್ರಹಿಸಿಟ್ಟಿರುವ ಹಣವನ್ನು ಈ ಕೆಲಸಕ್ಕೆ ತರುತ್ತಿದ್ದಾರೆ. ಏಳೆಂಟು ವರ್ಷದ ಒಬ್ಬ ಹುಡುಗಿ ತನ್ನ ತಂದೆಯೊಂದಿಗೆ ಹೇಳಿದಳು– ಈ ಹಾಲ್‌ಗಳಿಗೆ ಹೋಗಿ ನಾವು ಊಟ ಸಹ ಮಾಡುತ್ತಿದ್ದೆವು.

ಆಟ ಸಹ ಆಡುತ್ತಿದ್ದೆವು. ಕಾರ್ಯಕ್ರಮ ಜರಗಿಸುತ್ತಿದ್ದೆವು. ನಾನು ಈ ಹಾಲ್‌ಗಳ ಪುನರ್‌ನಿರ್ಮಾಣಕ್ಕೆ ನನ್ನ ಪಾಲು ನೀಡಲು ಬಯಸುತ್ತೇನೆ. ನಾನು ಸಂಗ್ರಹಿಸಿದ ಹಣ ನಾನು ನೀಡುತ್ತೇನೆ ಎಂದು ಹೇಳುತ್ತಾ ತಾನು ಸಂಗ್ರಹಿಸಿಟ್ಟಿದ್ದ ಹಣ ತಂದು ಕೊಟ್ಟಳು. ನಮ್ಮ ಮಕ್ಕಳು ಸಹ ಇಂತಹ ಭಾವನೆ ಹೊಂದಿರುವಾಗ ಅವರನ್ನು ನಿರಾಶೆಗೊಳಪಡಿಸಲು ಯಾರಿಗೆ ಸಾಧ್ಯ. ಈ ಸಾಮಾನ್ಯ ನಷ್ಟವಂತೂ ಏನನ್ನೂ ಮಾಡಲಾರದು.

ಹಾಲ್‌ಗೆ ಬೆಂಕಿ ಹಿಡಿದಾಗ ಒಬ್ಬರು ಲೈಬ್ರರಿಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದರು. ಹೊರಗೆ ಏನಾಗುತ್ತಿದೆ ಎಂದು ಅವರಿಗೆ ತಿಳಿದಿರಲಿಲ್ಲ. ಅಲ್ಲಾಹನು ಪವಾಡ ಸದೃಶವಾಗಿ ಅವರನ್ನು ರಕ್ಷಿಸಿದನು. ಅವರು ಕೆಲವು ಸೆಕಂಡುಗಳ ಕಾಲ ತಡಮಾಡುತ್ತಿದ್ದರೆ ಅವರು ಸುಡಲ್ಪಡುತ್ತಿದ್ದರು. ಅಂತೂ ಅಲ್ಲಾಹನು ಬಹಳ ಅನುಗ್ರಹ ತೋರಿಸಿದನು.

ಅಸೂಯೆಗಾರರ ಅಸೂಯೆ ವರ್ಧಿಸುತ್ತಾ ಇದೆ. ಆದುದರಿಂದ ಪ್ರಾರ್ಥನೆ ಕಡೆಗೆ ಹೆಚ್ಚು ಗಮನಹರಿಸಬೇಕು. **ರಬ್ಬಿಕುಲ್ಲು ಶೈಯಿನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ.** ಓ ನನ್ನ ಪ್ರಭು ಎಲ್ಲಾ ವಸ್ತುಗಳು ನಿನ್ನ ಸೇವಕರಾಗಿದ್ದಾರೆ. ಓ ನನ್ನ ಪ್ರಭು, ನನ್ನನ್ನು ರಕ್ಷಿಸು, ನನಗೆ ಸಹಾಯ ನೀಡು, ನನ್ನ ಮೇಲೆ ದಯೆದೋರು. ಎಂಬ ದುಆ ಮಾಡುತ್ತಿರಬೇಕು.

**ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಮ್ ವ ನಊಝುಬಿಕ ಮಿನ್ ಶುರೂರಿಹಿಮ್.** ಓ ನಮ್ಮ ಅಲ್ಲಾಹ್, ನಿಶ್ಚಯವಾಗಿಯೂ ನಾವು ನಿನ್ನನ್ನು ಅವರ ಎದೆಯ ಮುಂದೆ ಇರಿಸುತ್ತೇವೆ. ಅವರ ಕೆಡುಕುಗಳಿಂದ ರಕ್ಷಣೆ ಪಡೆಯಲು ನಿನ್ನ ಆಶ್ರಯ ಬೇಡಿಕೊಳ್ಳುತ್ತೇವೆ. ಎಂಬ ಪ್ರಾರ್ಥನೆಯನ್ನೂ ಮಾಡುತ್ತಿರಬೇಕು. ಅದೇ ರೀತಿ,

**ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅಝಾಬನ್ನಾರ್.** ಓ ನಮ್ಮ ಪ್ರಭು ನಮಗೆ ಇಹಲೋಕದಲ್ಲಿ ಒಳಿತನ್ನು ನೀಡು. ನಮಗೆ ಪರಲೋಕದಲ್ಲೂ ಒಳಿತನ್ನು ನೀಡು. ನಮ್ಮನ್ನು ಅಗ್ನಿಯ ಶಿಕ್ಷೆಯಿಂದ ರಕ್ಷಿಸು ಎಂಬ ಪ್ರಾರ್ಥನೆಯನ್ನೂ ಮಾಡುತ್ತಿರಬೇಕು.

ಈ ಘಟನೆ ನಮ್ಮ ಅಜಾಗರೂಕತೆಯ ಕಾರಣದಿಂದ ಸಂಭವಿಸಿದ್ದರೆ ನಾವು ಇಸ್ತಿಗ್‌ಫಾರ್ ಸಹ ಮಾಡುವ ಆವಶ್ಯಕತೆ ಇರುತ್ತದೆ. ಇನ್ನು ಮುಂದೆ ನಾವು ನಮ್ಮ ಹೊಣೆಗಾರಿಕೆಗಳನ್ನು ಸರಿಯಾದ ರೀತಿಯಲ್ಲಿ ಈಡೇರಿಸುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ. ಮತ್ತು ಬಲಹೀನತೆಗಳನ್ನು ದೂರ ಸರಿಸಲಿ. ಈ ಘಟನೆ ಒಂದು ಪರೀಕ್ಷೆಯಾಗಿದ್ದರೆ ನಾವು ಅದನ್ನು ಜಯಶಾಲಿಗಳಾಗಿ ದಾಟಿ ಹೋಗಲು ಅಲ್ಲಾಹನು ನಮಗೆ ಅನುಗ್ರಹ ನೀಡಲಿ. ಮತ್ತು ತನ್ನ ಬಹುಮಾನಗಳನ್ನು ಮೊದಲಿಗಿಂತ ಹೆಚ್ಚು ಹೆಚ್ಚಾಗಿ ನಮಗೆ ನೀಡಲಿ. ಅಲ್ಲಾಹನು ಶುಭವಾರ್ತೆ ನೀಡಿದ ಸಹನೆ ದೋರುವವರೊಂದಿಗೆ ನಮ್ಮನ್ನು ಸೇರಿಸಲಿ. ಮೊದಲಿಗಿಂತ ಹೆಚ್ಚು ಅಭಿವೃದ್ಧಿಯನ್ನು ನಾವು ಕಾಣುವಂತಾಗಲಿ – ಆಮೀನ್.

(ಖುತ್‌ಬದ ಕೊನೆಯಲ್ಲಿ ಹುಝೂರ್, ಮುಕರ್ರಮ್ ಚೌದರಿ ಮಹ್ಮೂದಹ್ಮದ್ ಸಾಹೆಬ್ – ದರ್‌ವೇಶ್ ಖಾದಿಯಾನ್, ಮತ್ತು ಸಿರಿಯಾದವರಾದ ಮುಕರ್ರಂ ಖಾಲಿದ್ ಸಲೀಂ ಅಬ್ಬಾಸ್ ಸಾಹೇಬ್ ಇವರ ನಿಧನದ ಕುರಿತು ಪ್ರಸ್ತಾಪಿಸಿದರು. ಹಾಗೂ ಸಿರಿಯಾದಲ್ಲಿಯೇ ಶಹೀದ್ ಆಗಿರುವ ಓರ್ವ ಅಹ್ಮದಿ ಸಹೋದರನ ಕುರಿತು ಪ್ರಸ್ತಾಪಿಸುತ್ತಾ ಅವರೆಲ್ಲರ ಒಳಿತಿಗಾಗಿ ಪ್ರಾರ್ಥಿಸಿದರು. ಮತ್ತು ಅವರ ಜನಾಝ ನಮಾಝ್ ಗಾಯಿಬ್ ನಿರ್ವಹಿಸುವುದಾಗಿ ಹೇಳಿದರು).

––––––––––––––*****––––––––––––––

*Friday Sermon delivered by Hadrath Khaleefatul Masih Al Khamis*(atba)

*at Masjid Baithul Futhuh, London on 02-10-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon